# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಿಗಾಗಿ ಸಂಬಂಧಿಸಿದ ಹವಾಮಾನ ಕೇಂದ್ರ ಮತ್ತು ಪರ್ಯಾಯ ಹವಾಮಾನ ಕೇಂದ್ರಗಳ ಪಟ್ಟಿ ಅಧಿಸೂಚಿಸುವ ಕುರಿತು.

ಓದಲಾಗಿದೆ: 1. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿ:04.03.2016 ರಂದು ನಡೆದ ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯ ತೀರ್ಮಾನ.

2. ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರ, ಬೆಂಗಳೂರು ಇವರ ಪತ್ರ ದಿ: 26.03.2016.

3. ಕೃಷಿ ಆಯುಕ್ತರ ಪ್ರಸ್ತಾವನೆ ಸಂ: ಉಕೃನಿ(ಬೆವಿ)/ತಾಂ–1/1p/2016–17. ದಿ: 10.05.2016.

4. ಸರ್ಕಾರದ ಆದೇಶ ಸಂ: ಕೃಇ 12 ಕೃಉಇ 2016, ದಿ: 26–05–2016.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸಭೆಯಲ್ಲಿ ಸೂಚಿಸಿರುವಂತೆ 2016–17ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಿರುವ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಲ್ಲಿ ಮಳೆ ಹಾಗೂ ಇತರೆ ಹವಾಮಾನ ಅಂಶಗಳನ್ನು ಬಳಸಿಕೊಳ್ಳಲು ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರ (Telemetric Rainguages -TRG) ಮತ್ತು ಟೆಲಿಮೆಟ್ರಿಕ್ ಹವಾಮಾನ ಕೇಂದ್ರ (Telemetric Weather Stations-TWS) ಗಳ ಪ್ರತ್ಯೇಕ ಸರ್ಕಾರಿ ಆದೇಶ ಹೊರಡಿಸಬೇಕಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಇವರ ಪತ್ರದಲ್ಲಿ ಕರ್ನಾಟಕ ರಾಜ್ಯದ ಹೋಬಳಿಮಟ್ಟದಲ್ಲಿ TWS ಹಾಗೂ ಗ್ರಾಮ ಪಂಚಾಯತಿ / ಪಟ್ಟಣ ಪಂಚಾಯತಿ ಮಟ್ಟದಲ್ಲಿ TRG ಗಳಿಗೆ ಸಂಬಂಧಿಸಿದ ಹವಾಮಾನ ಕೇಂದ್ರ ಮತ್ತು ಪರ್ಯಾಯ ಹವಾಮಾನ ಕೇಂದ್ರಗಳ ಪಟ್ಟಿಯನ್ನು ನೀಡಿರುತ್ತಾರೆ. ಹಾಗೂ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮಳೆ / ಹವಾಮಾನ ಅಳೆಯಲು ಸ್ಥಾಪಿಸಿರುವ ಕೇಂದ್ರವನ್ನು ನಿಗಧಿಪಡಿಸಿರುವ ಸಂಬಂಧಿಸಿದ ಮಳೆ ಮಾಪನ / ಹವಾಮಾನ ಮಾಪನ ಕೇಂದ್ರವೆಂದು (Reference Station) ಹಾಗೂ ಈ ಸಂಬಂಧಿಸಿದ ಮಳೆ ಮಾಪನ / ಹವಾಮಾನ ಮಾಪನ ಕೇಂದ್ರ ಕಾರಣಾಂತರದಿಂದ ಮಳೆ / ಹವಾಮಾನ ಮಾಪನ ಮಡಲು ಸಾದ್ಯವಾಗದಿದ್ದಲ್ಲಿ ಅಲ್ಲಿಯೇ ಆ ಗ್ರಾಮ ಪಂಚಾಯತಿಗೆ ಸಮೀಪವಿರುವ ಮಳೆ ಮಾಪನ / ಹವಾಮಾನ ಮಾಪನ ಕೇಂದ್ರವನ್ನು ಪರ್ಯಾಯ ಮಳೆ ಮಾಪನ / ಹವಾಮಾನ ಮಾಪನ ಕೇಂದ್ರವೆಂದು (Backup Station) ಗುರುತಿಸಿ ಪಟ್ಟಿಮಾಡಿರುವ ಕೇಂದ್ರದ ಮಾಹಿತಿಯನ್ನು ಮಾತ್ರ ಪರಿಗಣಿಸತಕ್ಕದ್ದು ಎಂದು ತಿಳಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಇವರ ಪತ್ರದ ವರದಿಯನ್ನು ಅಡಕಗೊಳಿಸುತ್ತಾ 2016–17ನೇ

ಸಾಲಿನಲ್ಲಿ ಅನುಷ್ಠಾನಗೊಳಿಸಲಿರುವ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಲ್ಲಿ ಮಳೆ ಹಾಗೂ ಇತರೆ ಹವಾಮಾನ ಅಂಶಗಳನ್ನು ಬಳಸಿಕೊಳ್ಳಲು ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರ (Telemetric Rainguages -TRG) ಮತ್ತು ಟೆಲಿಮೆಟ್ರಿಕ್ ಹವಾಮಾನ ಕೇಂದ್ರ (Telemetric Weather Stations-TWS) ಗಳ ಪ್ರತ್ಯೇಕ ಸರ್ಕಾರಿ ಆದೇಶ ಹೊರಡಿಸಲು ಕೋರಲಾಗಿದೆ.

ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗ ಸೂಚಿಯನ್ವಯ ರಾಜ್ಯದಲ್ಲಿ 2016-17ನೇ ಸಾಲಿನಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಈ ಯೋಜನೆಗೆ ತಗಲುವ ವೆಚ್ಚವನ್ನು ಯೋಜನೆ ಲೆಕ್ಕ ಶೀರ್ಷಿಕೆ: 2401-00-110-0-07 ಅಡಿಯಲ್ಲಿ ಬೆಳೆ ವಿಮೆಗೆ ಬೇಕಾಗುವ ರಾಜ್ಯ ಸರ್ಕಾರದ ಅನುದಾನ **ರೂ.675.38 ಕೋಟಿಗಳನ್ನು** ವೆಚ್ಚಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಆದೇಶದಲ್ಲಿ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರ ಮತ್ತು ಟೆಲಿಮೆಟ್ರಿಕ್ ಹವಾಮಾನ ಕೇಂದ್ರಗಳನ್ನು ಪರಿಶೀಲಿಸಿ ಆದೇಶಿಸಲಾಗುವುದು ಎಂದು ವಿವರಿಸಲಾಗಿದೆ.

ಈ ಮೇಲೆ ತಿಳಿಸಿದ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/73/ಕೃಉಇ/2016, ಬೆಂಗಳೂರು,**
**ದಿ: 14-06-2016.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಪ್ರಸ್ತುತ ಹಂಗಾಮಿನಲ್ಲಿ ಅನುಷ್ಠಾನಗೊಳಿಸಲಿರುವ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (PMFBY) ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಲ್ಲಿ (WBCIS) ಮಳೆ ಹಾಗೂ ಇತರೆ ಹವಾಮಾನ ಅಂಶಗಳನ್ನು ಬಳಸಿಕೊಳ್ಳಲು ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರ (Telemetric Rainguages -TRG) ಮತ್ತು ಟೆಲಿಮೆಟ್ರಿಕ್ ಹವಾಮಾನ ಕೇಂದ್ರ (Telemetric Weather Stations-TWS) ಗಳನ್ನು ನಿಗಧಿಪಡಿಸಬೇಕಾಗಿರುತ್ತದೆ ಹಾಗೂ ಸಂಬಂಧಿಸಿದ ಕೇಂದ್ರಗಳಲ್ಲಿ ಕಾರಣಾಂತರದಿಂದ ಹವಾಮಾನ ಅಂಶಗಳನ್ನು ಅಳೆಯಲು ಸಾಧ್ಯವಾಗದಿದ್ದಲ್ಲಿ ಮಳೆ ಮತ್ತು ಹವಾಮಾನ ಅಂಶಗಳನ್ನು ಅಳೆಯಲು ಪರ್ಯಾಯ ಕೇಂದ್ರಗಳನ್ನು ಹಾಗೂ ಅವುಗಳನ್ನು ಸ್ಥಾಪಿಸಿರುವ ನಿರ್ಧಿಷ್ಟ ಸ್ಥಳದ ವಿವರಗಳನ್ನು ಸಹ ನಿಗಧಿಪಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಇವರ ವರದಿಯನ್ನು ಅವಲೋಕಿಸಿ ವಿವಿಧ ಹವಾಮಾನ ಕೇಂದ್ರ ಮತ್ತು ಪರ್ಯಾಯ ಹವಾಮಾನ ಕೇಂದ್ರಗಳ ಪಟ್ಟಿಯನ್ನು **ಅನುಬಂಧದಲ್ಲಿ** ನೀಡಿರುವಂತೆ ಪರಿಗಣಿಸಲು ಮಂಜೂರಾತಿ ನೀಡಿದೆ.

ಮಳೆಯ ಪ್ರಮಾಣವನ್ನು ಅಳೆಯಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಳವಡಿಸಲಾದ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರವನ್ನು ಮತ್ತು ಇತರೆ ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ,

ಆರ್ದ್ರತೆ ಇತ್ಯಾದಿ., ಇವುಗಳನ್ನು ಅಳೆಯಲು ಹೋಬಳಿ ಕೇಂದ್ರಗಳಲ್ಲಿ ಅಥವಾ ಹೋಬಳಿ/ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಹವಾಮಾನ ಕೇಂದ್ರವನ್ನು ಉಪಯೋಗಿಸುವುದು.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ಬಿತ್ತನೆ / ನಾಟಿ ಪೂರ್ಣವಾಗಿ ವಿಫಲಗೊಂಡಲ್ಲಿ, ಬೆಳೆ ಬಿತ್ತನೆಯಿಂದ ಕಟಾವಿನವರೆಗಿನ ಅವಧಿಯಲ್ಲಿ ಸಂಭವಿಸುವ ಬೆಳೆ ನಷ್ಟ ಮುಂತಾದವುಗಳನ್ನು ನಿರ್ಧರಿಸಲು ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಅಧಿಸೂಚಿತ ಕ್ಷೇತ್ರ ಘಟಕಗಳ ಸಂಬಂಧಿಸಿದ ಮಳೆ ಮತ್ತು ಹವಾಮಾನ ಕೇಂದ್ರ ಅಥವಾ ಪರ್ಯಾಯ ಕೇಂದ್ರಗಳ ಮಾಹಿತಿಯನ್ನು ಮಾತ್ರ ಪರಿಗಣಿಸತಕ್ಕದ್ದು. ಇತರೆ ಕೇಂದ್ರಗಳ ಮಾಹಿತಿ ಅಥವಾ ಇಳುವರಿ ಮಾಹಿತಿಯನ್ನು ಪರಿಗಣಿಸತಕ್ಕದಲ್ಲ ಎಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ಶಿವಕುಮಾರ್

**(ಆರ್.ಎಸ್.ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

14/6

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
4. ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ರಾಜ್ಯದ ಬೆಳೆ ವಿಮಾ ಸಮಿತಿಯ ಎಲ್ಲಾ ಸದಸ್ಯರಿಗೆ.(ಕೃಷಿ ಆಯುಕ್ತರ ಮುಖಾಂತರ)
6. ನಿರ್ದೇಶಕರು ತೋಟಗಾರಿಕೆ ಇಲಾಖೆ, ಬೆಂಗಳೂರು
7. ಕೃಷಿ ಆಯುಕ್ತರು, ಬೆಂಗಳೂರು.
8. ಕೃಷಿ ನಿರ್ದೇಶಕರು, ಬೆಂಗಳೂರು.
9. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
10. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಎಲ್ಲಾ ಜಿಲ್ಲಾಧಿಕಾರಿಗಳು.
12. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
13. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
14. ಎಲ್ಲಾ ಜಿಲ್ಲಾ ಉಪ ತೋಟಗಾರಿಕಾ ನಿರ್ದೇಶಕರು
15. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
16. ಎಲ್ಲಾ ಲೀಡ್ ಬ್ಯಾಂಕುಗಳು.
17. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.
18. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.

19. ಎಲ್ಲಾ ನೋಡಲ್ ಬ್ಯಾಂಕುಗಳು.
20. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
21. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
22. ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
23. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
24. ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 4 ಮತ್ತು 10 ರಿಂದ 12 ರವರೆಗೆ ಕೃಷಿ ನಿರ್ದೇಶಕರ ಮೂಲಕ
ಕ್ರಮ ಸಂಖ್ಯೆ: 13, 14 ನಿರ್ದೇಶಕರು ತೋಟಗಾರಿಕೆ ಇಲಾಖೆರವರ ಮೂಲಕ ಹಾಗೂ
ಕ್ರಮ ಸಂಖ್ಯೆ: 15-18 ರವರೆಗೆ ವಿಮಾ ಸಂಸ್ಥೆಯ ಮೂಲಕ)

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.